ಜಿ. ಕ್ಯಾಟಗರಿಯಡಿ ನಿವೇಶನ ಹಂಚಿಕೆ

108 (643) ಶ್ರೀ ಅಪ್ಪಚ್ಚುರಂಜನ್ ಎಂ.ಪಿ. (ಮಡಿಕೇರಿ) :– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 'ಜಿ' ಕ್ಯಾಟಗರಿಯಲ್ಲಿ ಎಷ್ಟು ವಿಧಾನಸಭೆ ಮತ್ತು ವಿಧಾನಪರಿಷತ್ ಸದಸ್ಯರಿಗೆ ಹಾಗೂ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲಾಗಿದೆ. (ಶಾಸಕರ ಹಾಗೂ ಸಂಸತ್ ಸದಸ್ಯರ ಹೆಸರುಗಳು ಹಾಗೂ ವಿಳಾಸವನ್ನು ವಿವರವಾಗಿ ನೀಡುವುದು)

(ಆ) ಹಂಚಿಕೆಯಾಗದೇ ಇರುವ ಶಾಸಕರುಗಳಿಗೆ ನಿವೇಶನ ಹಂಚಲು ಕ್ರಮ ತೆಗೆದುಕೊಳ್ಳಲಾಗಿದೆ ವಿವರ ನೀಡುವುದು?

ಶ್ರೀ ಸಿದ್ದರಾಮಯ್ಯ: (ಮಾನ್ಯ ಮುಖ್ಯಮಂತ್ರಿಗಳು):–

(ಅ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 'ಜಿ' ಕ್ಯಾಟಗರಿಯಲ್ಲಿ 15 ವಿಧಾನಸಭಾ ಸದಸ್ಯರು ಮತ್ತು 9 ವಿಧಾನಪರಿಷತ್ ಸದಸ್ಯರಿಗೆ ಹಾಗೂ 01 ಮಾಜಿ ಲೋಕಸಭಾ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ. ವಿವರಗಳನ್ನು ಅನುಬಂದಲ್ಲಿ ನೀಡಲಾಗಿದೆ.

(ಆ) ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ್ವಯ ಸರ್ಕಾರದ ಆದೇಶ ಸಂಖ್ಯೆ ನಆಇ 341 ಬೆಂಆಸೇ 2012. ದಿನಾಂಕ: 17–10–2012 ರಂದು ಮಾನ್ಯ ನಿವೃತ್ತಿ ನ್ಯಾಯಮೂರ್ತಿ ಗೌರವಾನ್ವಿತ ಬಿ.ಪದ್ಮರಾಜ್ ರವರ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿರುತ್ತದೆ ಸಮಿತಿಯು ವರದಿಯನ್ನು ಸಲ್ಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ನಾನು ಕೇಳಿರುವಂತಹ ಪ್ರಶ್ನೆ ಏನೆಂದರೆ, 1983ರಿಂದೀಚೆಗೆ ಜಿ. ಕ್ಯಾಟಗರಿಯಲ್ಲಿ ಯಾರ್ಯಾರಿಗೆ ಸೈಟ್ ಅನ್ನು ಮಂಜೂರಾತಿ ಮಾಡಿದ್ದೀರಾ ಎಂದು ಕೇಳಿದ್ದೇನೆ. ಆದರೆ

ಮೂರು ವರ್ಷಕ್ಕೆ ಮೊಟಕು ಮಾಡಿದ್ದಾರೆ. ಇದರ ಜೊತೆಗೆ ಜಿ.ಕ್ಯಾಟಗೆರಿಯ ಸೈಟನ್ನು ಮಂಜೂರಾತಿ ಮಾಡಬೇಕಾದರೆ ಯಾವ ನಿಯಮ, ಯಾವ ಮಾನದಂಡದಲ್ಲಿ ಮಂಜೂರಾತಿಯನ್ನು ಮಾಡುತ್ತೀರಾ ಎಂದು ನಾನು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಬಿ. ಪದ್ಮರಾಜ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆಂದು ಹೇಳಿದ್ದಾರೆ. ಆ ಸಮಿತಿಗೆ ಇವರು ಯಾವ ರೀತಿಯಾಗಿ direction ಅನ್ನು ಕೊಟ್ಟಿದ್ದಾರೆ? ಆ ಸಮಿತಿಯಲ್ಲಿ ಯಾರ್ಯಾರು ಇದ್ದಾರೆ? ಆ ಸಮಿತಿಯ ಉದ್ದೇಶವೇನು?

ಶ್ರೀ ಸಿದ್ದರಾಮಯ್ಯ: ಇಲ್ಲಿ ಪ್ರಶ್ನೆ ಇರುವುದು ಕಳೆದ ಮೂರು ವರ್ಷಗಳಲ್ಲಿ ... ಈ ರೀತಿಯಲ್ಲವೆ ನಿಮ್ಮ ಪ್ರಶ್ನೆ ಇರುವುದು.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ನಾನು 1983ರಿಂದ ಎಂದು ನಾನು ಕೇಳಿದ್ದೇನೆ. ಅದನ್ನು ಮೂರು ವರ್ಷಗಳಿಂದ ಎಂದು ಮಾಡಿದ್ದಾರೆ. ಏಕೆ ಈ ರೀತಿ ಆಯಿತು ಎಂದು ನನಗೆ ಗೊತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಇದನ್ನು ನಾನು ಬರೆದುಕೊಂಡಿಲ್ಲ.

ಅಧ್ಯಕ್ಷರು: ಮಾನ್ಯ ಅಪ್ಪಚ್ಚುರಂಜನ್‌ರವರೆ,...

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಬೇಕಾದರೆ, ಅದಕ್ಕೂ ಸಹ ಉತ್ತರವನ್ನು ಕೊಡುತ್ತೇನೆ. ಮಾನ್ಯ ಅಪ್ಪಚ್ಚು ರಂಜನ್ ರವರೆ, 1985 ರಿಂದ ಇಂದಿನವರೆಗೆ 1620 ಸೈಟ್‌ಗಳನ್ನು ಜಿ ಕ್ಯಾಟಗರಿಯಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ನಾವ್ಯಾರು ಇಲ್ಲ. ನಾವು ಸೈಟನ್ನು ತೆಗೆದುಕೊಂಡಿಲ್ಲ. ನಾವು ಸೈಟನ್ನು ಸಹ ಕೊಟ್ಟಿರುವುದಿಲ್ಲ. ನಿಮ್ಮ ಸರ್ಕಾರದಲ್ಲಿ ಸೈಟನ್ನು ಕೊಟ್ಟಿದ್ದಾರೆ. ನೀವು ಅಧಿಕಾರದಲ್ಲಿದ್ದಾಗ ಆಗಿನ ಕಾಲದಲ್ಲಿಯೇ ಕೊಟ್ಟಿದ್ದಾರೆ . ನಾವು ಅಧಿಕಾರದಲ್ಲಿದ್ದಾಗ ಕೊಟ್ಟಿರುವುದಿಲ್ಲ. ನಿಮ್ಮ ಸರ್ಕಾರವಿದ್ದಾಗ ಇದು ಕೋರ್ಟಿಗೆ ಹೋಗಿ stay ಆಗಿರುವುದು. ನೀವು ಸರಿಯಾಗಿ ಮಾಡಲಿಲ್ಲವೆಂದು ಅವರು ಕೋರ್ಟಿಗೆ ಹೋಗಿರುವುದು. ಕೋರ್ಟಿಗೆ ಇದು ಹೋಗಿ ಅಲ್ಲಿ writ petition ಗಳು ಇವೆ. ಸೈಟುಗಳನ್ನು ಕೊಟ್ಟಿರುವ ಬಗ್ಗೆ ವಿಚಾರಣೆ ಮಾಡುವುದಕ್ಕಾಗಿ Justice Padmaraj

ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ಆಗಿದೆ. ಅದರಲ್ಲಿ ಒಬ್ಬರು Justice Rangavittalachar ಎಂದು ಹೇಳಿ retired High Court Judge ಒಬ್ಬರು ಸದಸ್ಯರಾಗಿದ್ದಾರೆ. ಶ್ರೀ ಪಿ.ಬಿ. ಮಹಿಷಿ, ಐ.ಎ.ಎಸ್., ಎಂದು ಹೇಳಿ ಇವರೂ ಕೂಡ ಒಬ್ಬರು retired Chief Secretary ಸಹ ಸದಸ್ಯರಾಗಿದ್ದಾರೆ. ಅವರು ಇನ್ನೂ ವರದಿಯನ್ನು ಕೊಟ್ಟಿರುವುದಿಲ್ಲ. ವರದಿಯನ್ನು ಕೊಡುವ ಬಗ್ಗೆ ಟೈಮ್ ತೆಗದುಕೊಂಡಿದ್ದಾರೆ. ಅವರು ವರದಿಯನ್ನು ಕೊಟ್ಟ ಮೇಲೆ, ಅವರು ಏನು ಶಿಫಾರಸ್ಸು ಮಾಡುತ್ತಾರೆ ಅದರ ಆಧಾರದ ಮೇಲೆ ಸರ್ಕಾರವು ಕ್ರಮ ತೆಗೆದುಕೊಳ್ಳುತ್ತದೆ. ಈಗ ಯಾವುದನ್ನೂ ಕೂಡ ಕೊಡಬಾರದು ಎಂದು ಹೈಕೋರ್ಟಿನ ಆದೇಶವಿದೆ. ನಾವು ಅಧಿಕಾರಕ್ಕೆ ಬಂದ ಮೇಲೆ ಒಬ್ಬರಿಗೂ ಕೂಡ ಸೈಟನ್ನು ಕೊಟ್ಟಿಲ್ಲ. ನಮ್ಮ ಹತ್ತಿರ ಸೈಟ್ ಕೊಡಿ ಎಂದು ಯಾರೂ ಕೇಳಿರುವುದಿಲ್ಲ. ನಾವು ಕೊಡುವುದೂ ಸಹ ಇಲ್ಲ ಏಕೆಂದರೆ, ಈ ಬಗ್ಗೆ ಹೈಕೋರ್ಟಿನ ಆದೇಶ ಇದೆ. ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ವರದಿ ಬಂದ ನಂತರ ನಾವು ಅದನ್ನು ಮಾಡುತ್ತೇವೆ. ಈ ಜಿ–ಕ್ಯಾಟಗರಿಯ ಮೇಲೆ ಏನೇನು ಸೈಟ್‌ಗಳನ್ನು ಕೊಟ್ಟಿದ್ದಾರೆ. ಆ ಸೈಟ್‌ಗಳನ್ನು ಎಂಎಲ್‌ಎ, ಎಂಎಲ್‌ಸಿ, ಅಥವಾ ಬೇರೆಬೇರೆಯವರಿಗೆ ಕೊಟ್ಟಿರಬಹದು, ಲೋಕಸಭಾ ಸದಸ್ಯರಿಗೆ ಕೊಟ್ಟಿರಬಹದು, ಇನ್ಯಾರೋ ಕಾರು ಡ್ರೈವರ್‌ಗಳಿಗೆ ಕೊಟ್ಟಿರಬಹದು, ಅವುಗಳ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ವರದಿಯನ್ನು ಕೊಟ್ಟ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಈ ಬಗ್ಗೆ ವಾಸ್ತವಿಕವಾಗಿ ಹೇಳಲೇ? ನಿಮ್ಮ ಪ್ರಶ್ನೆಗೆ ಇಷ್ಟು ದೀರ್ಘವಾಗಿ ಉತ್ತರ ಕೊಡಲೇಬೇಕಾಗಿರಲಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂತಹ ಪ್ರಶ್ನೆ ಏನೆಂದರೆ, 1983ರಿಂದ ಜಿ–ಕ್ಯಾಟಗರಿಯಲ್ಲಿ ಯಾರ್ಯಾರಿಗೆ ಕೊಟ್ಟಿದ್ದೀರೆಂದು ಕೇಳಿದ್ದೇನೆ. ನನ್ನ ಉದ್ದೇಶ ಏನಿದೆ ಎಂದರೆ ಕೆಲವು ಶಾಸಕರುಗಳು 2–3 ಸೈಟ್‌ಗಳನ್ನು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು: ಅದು ನಿಮ್ಮ ಪ್ರಶ್ನೆಯಲ್ಲಿ ಇರುವುದಿಲ್ಲ. ಅದು ಬೇರೆ ಮಾತು. ಈ ಬಗ್ಗೆ ಮಾನ್ಯ ಮುಖ್ಯಮಖ್ಯಮಂತ್ರಿಗಳು ಮುಂದುವರಿದು ಹೇಳಿದ್ದಾರೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ಈ ಸಮಿತಿ ಎಷ್ಟು ದಿವಸದೊಳಗೆ ವರದಿ ಕೊಡುತ್ತಾರೆ ಎಂದು ಸ್ವಲ್ಪ ಹೇಳಲಿ.

ಅಧ್ಯಕ್ಷರು: ಅದು ನಿಮ್ಮ ಪ್ರಶ್ನೆಯಲ್ಲಿ ಇರುವುದಿಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಂದುವರಿದು ಹೇಳಿದ್ದಾರೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ನಾನು ತಮಗೆ 1983 ರಿಂದ ಎಂದು ಕೇಳಿದ್ದೇನೆ. ನನ್ನ ಉದ್ದೇಶವೇನೆಂದರೆ, ಕೆಲವರು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಹಲವಾರು taxi driver ಗಳಿಗೂ ಯಾರ್‍ಯಾರಿಗೋ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಆ ಉದ್ದೇಶದಿಂದ ನಾನು ಕೇಳಿದ್ದೇನೆ. ನಮಗೆ ಕೆಲಸ ಆಗಬೇಕು. ಆ ಉದ್ದೇಶದಿಂದ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ನನಗೆ 1983ರಿಂದ ಪೂರ್ತಿ report ಅನ್ನು ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಈ ಸಮಿತಿಯು ವರದಿಯನ್ನು ಯಾವಾಗ ಕೊಡುತ್ತದೆ? ಇದಕ್ಕೇನಾದರೂ ಕಾಲಮಿತಿ ಇದೆಯೇ?

ಶ್ರೀ ಸಿದ್ದರಾಮಯ್ಯ: ಅದು Committee headed by Justice B. Padmaraj ಅವರದ್ದು ಒಂದು ಕಮಿಟಿ ಇದೆ. ಅದರಲ್ಲಿ ಒಬ್ಬರು retired High Court Judge, Rangavittalachar ಇದ್ದಾರೆ. ಆಮೇಲೆ ಪಿ.ಬಿ. ಮಹಿಷಿ ಇದ್ದಾರೆ.

ಅಧ್ಯಕ್ಷರು: ಅವರು ಯಾವಾಗ ಕೊಡುತ್ತಾರೆಂದು ಕೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಆಗಸ್ಟ್ 26 ರೊಳಗಡೆ ಕೊಡುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು: ಆಯಿತು.